**ನಿಮ್ಮಲ್ಲಿ ಯಾವುದೇ ಪ್ರಶ್ನೆಗಳು/ ಸಲಹೆಗಳಿದ್ದಲ್ಲಿ ಅಥವಾ ಯಾವುದೇ ಸಹಕಾರ ಬೇಕಿದ್ದಲ್ಲಿ ನಮ್ಮನ್ನು ಸಂಪರ್ಕಿಸಿ.**


**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**

ಮಾನಸಗಂಗೋತ್ರಿ, ಮೈಸೂರು 570 006

**ದೂರವಾಣಿ** : 0821 2514449 / 2514618

**ಫ್ಯಾಕ್ಸ್** : 0821 2510515


**ಇ ಮೇಲ್** : director@aiishmysore.in


**ಕೆಲಸದ ವೇಳೆ** : ಬೆಳಗ್ಗೆ 9-00 ರಿಂದ ಸಂಜೆ 5-30 ರವರೆಗೆ

ಸೋಮವಾರದಿಂದ - ಶುಕ್ರವಾರದವರೆಗೆ

(ಕೇಂದ್ರ ಸರ್ಕಾರದ ರಜಾ ದಿನಗಳನ್ನು ಹೊರತುಪಡಿಸಿ)

# ನಿಮ್ಮ ಡಿಜಿಟಲ್ ಶ್ರವಣೋಪಕರಣದ ಬಗ್ಗೆ ತಿಳಿಯಿರಿ




**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**

ಮಾನಸಗಂಗೋತ್ರಿ, ಮೈಸೂರು - 570 006

## ನಿಮ್ಮ ಡಿಜಿಟಲ್ ಶ್ರವಣೋಪಕರಣದ ಬಗ್ಗೆ ತಿಳಿದುಕೊಳ್ಳಿ

**ಶ್ರವಣೋಪಕರಣವನ್ನು ಉಪಯೋಗಿಸುವವರ ಹೆಸರು :**

**ಕೇಸಿನ ಸಂಖ್ಯೆ :** **ವಯಸ್ಸು/ಲಿಂಗ :**

**ಪ್ರೆಸ್ಕ್ರಿಪ್‌ಷನ್ ಸಂಖ್ಯೆ :** **ಶ್ರವಣೋಪಕರಣವನ್ನು ಪಡೆದುಕೊಂಡ ದಿನಾಂಕ :**

ಶ್ರವಣೋಪಕರಣವೆಂದರೆ ಶಬ್ದವನ್ನು ಜೋರಾಗಿ ಕೇಳಿಸುವಂತೆ ಮಾಡುವ ಸಾಧನಗಳು. ಶ್ರವಣೋಪಕರಣವು ಅನಲಾಗ್ ಟೆಕ್ನಾಲಜಿ ಮೂಲಕ ಅಥವಾ ಡಿಜಿಟಲ್ ಟೆಕ್ನಾಲಜಿಯ ಮೂಲಕ ತನ್ನ ಕಾರ್ಯ ನಿರ್ವಹಿಸುತ್ತದೆ.

ಅನಲಾಗ್ ಶ್ರವಣೋಪಕರಣಗಳು ಶಬ್ದದ ತರಂಗಗಳನ್ನು ವರ್ಧಿಸಿ ಶಬ್ದವನ್ನು ಜೋರಾಗಿ ಮಾಡುತ್ತವೆ. ಅವು ಶಬ್ದವನ್ನು ಮೈಕ್ರೊಫೋನಿನ ಮೂಲಕ ಗ್ರಹಿಸುತ್ತದೆ, ನಂತರ ಶಬ್ದವನ್ನು ವಿದ್ಯುತ್ ಸೂಚನೆಗಳಾಗಿ ಪರಿವರ್ತಿಸುತ್ತದೆ. ನಂತರ ಶಬ್ದವನ್ನು ಹೆಚ್ಚು ಮಾಡಲಾಗುತ್ತದೆ. ಈ ಕಾರ್ಯವನ್ನು ಮಾಡಲು ಟ್ರಾನ್‌ಸಿಸ್ಟರ್‌ಗಳನ್ನು ಸರ್ಕ್ಯೂಟಿನಲ್ಲಿ ಉಪಯೋಗಿಸುತ್ತಾರೆ. ವರ್ಧಿಸಿದ ಶಬ್ದವೂ ರಿಸೀವರ್ ಮೂಲಕ ಕಿವಿಗೆ ಬರುತ್ತದೆ. ಅನಲಾಗ್ ಶ್ರವಣೋಪಕರಣಗಳು ಅತಿಯಾದ ಶಬ್ದಗಳನ್ನು ಕಡಿಮೆ ಪ್ರಮಾಣದಲ್ಲಿ ವರ್ಧಿಸುತ್ತದೆ. ಇದರಿಂದ ಶ್ರವಣೋಪಕರಣ ಬಳಸುವವರನ್ನು ಅಹಿತಕರ ಅತಿ ಹೆಚ್ಚಿನ ಶಬ್ದಗಳಿಂದ ರಕ್ಷಿಸುತ್ತದೆ. ಎಲ್ಲಾ ಅಳವಡಿಕೆಗಳು ವಾಲ್ಯೂಮ್ ಕಂಟ್ರೋಲ್ ಮತ್ತು ಟ್ರಿಮ್ಮರ್ ಕಂಟ್ರೋಲ್‌ಗಳ ಮೂಲಕ ಮಾಡಲಾಗುತ್ತದೆ.

ಡಿಜಿಟಲ್ ಶ್ರವಣೋಪಕರಣಗಳನ್ನು ಗಣಕಯಂತ್ರಗಳ ಚಿಪ್‌ಗಳನ್ನು ಅಳವಡಿಸಿಕೊಂಡು ತಯಾರಿಸಿರುತ್ತಾರೆ. ಇದರಿಂದ ಶ್ರವಣೋಪಕರಣದಿಂದ ಬರುವ ಶಬ್ದವನ್ನು ಹಾಗೂ ಶ್ರವಣೋಪಕರಣದ ಇತರ ಗುಣಗಳನ್ನು ಶ್ರವಣತಜ್ಞರು ಸುಲಭವಾಗಿ ಅಳವಡಿಸುತ್ತಾರೆ. ಗಣಕಯಂತ್ರದ ಚಿಪ್‌ಗಳನ್ನು ಉಪಯೋಗಿಸುವುದರಿಂದ ಶ್ರವಣೋಪಕರಣಗಳ ಗಾತ್ರವನ್ನು ಕಿರಿದಾಗಿಸಬಹುದು.

ಡಿಜಿಟಲ್ ಶ್ರವಣೋಪಕರಣಗಳಲ್ಲಿ ಅನೇಕ ಉಪಯೋಗಗಳಿವೆ ಅದರಲ್ಲಿ ಆಟೋಮ್ಯಾಟಿಕ್ ಶಬ್ದನಿಯಂತ್ರಣಗಳು, ಬೇರೆ ಬೇರೆ ಸಂದರ್ಭಗಳಲ್ಲಿ ಉಪಯೋಗಿಸಲು ಬೇರೆ ಬೇರೆ ಪ್ರೋಗ್ರಾಮ್‌ಗಳು (ಉದಾ: ಶಾಂತವಾದ, ಗಲಾಟೆಯಲ್ಲಿ, ದೂರವಾಣಿಯಲ್ಲಿ) ಮತ್ತು ಕೀರಲು ಶಬ್ದ ಕಡಿಮೆ ಮಾಡುವ ಸೌಲಭ್ಯಗಳಿವೆ.

ಇದರಲ್ಲಿ ಹಲವಾರು ಮಾದರಿಯ ಹಾಗೂ ವಿವಿಧ ಮಾಡೆಲ್‌ಗಳ ಶ್ರವಣೋಪಕರಣಗಳು ದೊರೆಯುತ್ತವೆ. ದಯವಿಟ್ಟು ನಿಮಗೆ ಸೂಚಿಸಿರುವ ಶ್ರವಣೋಪಕರಣದ ಹೆಸರು / ಮಾಡೆಲ್ ಹಾಗೂ ಮಾದರಿಯನ್ನು ಬರೆದಿಟ್ಟುಕೊಳ್ಳಿ.









| | | | |
|---|---|---|---|
| **ಕಿವಿಯ ಹಿಂಭಾಗದಲ್ಲಿ ಧರಿಸುವ ಶ್ರವಣೋಪಕರಣ.** | **ಕಿವಿಯೊಳಗಿರಿಸುವ ಶ್ರವಣೋಪಕರಣ** | **ಕಿವಿಯ ನಾಳದಲ್ಲಿರಿಸುವ ಶ್ರವಣೋಪಕರಣ** | **ಸಂಪೂರ್ಣವಾಗಿ ಕಿವಿಯ ನಾಳದಲ್ಲಿರಿಸುವ ಶ್ರವಣೋಪಕರಣ** |

ಶ್ರವಣೋಪಕರಣದ ಹೆಸರು:


ಬಲಕಿವಿಗೆ : _______________

ಎಡಕಿವಿಗೆ : _______________



- ಶ್ರವಣೋಪಕರಣವನ್ನು ಸ್ಟವ್, ದೂರದರ್ಶನ, ರೇಡಿಯೋ, ಹೀಟರ್‌ಗಳಿಂದ ದೂರವಿಡಿ.
- ಶ್ರವಣಶಕ್ತಿಯ ಪರೀಕ್ಷೆಗೆ ಮತ್ತು ಶ್ರವಣೋಪಕರಣದ ಪರೀಕ್ಷೆಗೆ ಶ್ರವಣತಜ್ಞರನ್ನು ನಿಯಮಿತವಾಗಿ ಭೇಟಿಕೊಡಿ.

ಅಚ್ಚು ಶಬ್ದವನ್ನು ಶ್ರವಣೋಪಕರಣದ ರಿಸೀವರ್ ನಿಂದ ಕಿವಿಗೆ ಕೇಳಿಸುವಂತೆ ಮಾಡುತ್ತದೆ. ಕಿವಿಯಚ್ಚು ಕೆಳಕಂಡ ಮಾದರಿಗಳಲ್ಲಿ ಯಾವುದಾದರೂ ಆಗಿರಬಹುದು



ಶೆಲ್ ಮಾದರಿ ಕಿವಿ ಅಚ್ಚು
(ಕಿವಿ ಹಿಂಭಾಗ ಧರಿಸುವ ಶ್ರವಣ ಸಾಧನಕ್ಕೆ)



ಸ್ಕೆಲಿಟನ್ ಮಾದರಿ ಕಿವಿ ಅಚ್ಚು



ನಾಳದ ಮಾದರಿ ಕಿವಿ ಅಚ್ಚು

ನಿಮಗೆ ಮಾಡಿರುವ ಕಿವಿಯ ಅಚ್ಚು : ಬಲಗಿವಿಗೆ / ಎಡಗಿವಿಗೆ / ಎರಡುಕಿವಿಗಳಗೆ ಈ ಕೆಳಗಿನ ಚಿತ್ರವು ಹೇಗೆ ಶ್ರವಣೋಪಕರಣಕ್ಕೆ ಟ್ಯೂಬ್/ನಾಳ ಮತ್ತು ಕಿವಿಯಚ್ಚು ಜೋಡಣೆ ಮಾಡಲಾಗಿದೆ ಎಂಬುದನ್ನು ತಿಳಸುತ್ತದೆ.



**ನೆನೆಪಿಡಿ**:

- ನಿಮ್ಮ ಶ್ರವಣೋಪಕರಣವನ್ನು ಉಪಯೋಗಿಸದಿದ್ದಾಗ 'ಆಫ್' ಮಾಡಿ.
- ನೀವು ಶ್ರವಣೋಪಕರಣವನ್ನು ತುಂಬಾ ಕಾಲದವರೆಗೆ ಉಪಯೋಗಿಸದಿದ್ದಾಗ ಬ್ಯಾಟರಿಯನ್ನು ಹೊರತೆಗೆದು ಇಡಿ ಬ್ಯಾಟರಿ ಹಾಕುವ ಜಾಗವನ್ನು ತೆರೆದಿಡಿ.
- ಸ್ನಾನಮಾಡುವಾಗ ಶ್ರವಣೋಪಕರಣವನ್ನು ಧರಿಸಬೇಡಿ.
- ನಿಮ್ಮ ಕಿವಿ ಸೋರುತ್ತಿದ್ದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಿ.
- ಮಳೆಯಲ್ಲಿದ್ದಾಗ ಶ್ರವಣೋಪಕರಣವನ್ನು ತೆಗೆದಿಡಿ.
- ನಿಯಮಿತವಾಗಿ ನಿಮ್ಮ ಶ್ರವಣೋಪಕರಣವನ್ನು ಸರ್ವೀಸ್‌ಗೆ ಕೊಡಿ.
- ನಿಮ್ಮ ಕಿವಿಯ ಅಚ್ಚನ್ನು ಪ್ರತಿ ಮೂರುದಿನಕ್ಕೊಮ್ಮೆ ಶುದ್ಧಗೊಳಿಸಿ.
- ಕಿವಿಯಚ್ಚುನ್ನು ಗುಗ್ಗೆಯಿಂದ ಅಥವಾ ಕಸದಿಂದ ಶುದ್ಧಗೊಳಸಲು ಬೆಚ್ಚಗಿನ ನೀರನ್ನು ಅಥವಾ ಸೋಪಿನ ನೀರನ್ನು ಉಪಯೋಗಿಸಿ. ಕಿವಿಯಚ್ಚುನ್ನು ಉಪಯೋಗಿಸುವ ಮುನ್ನ ಅದನ್ನು ಚೆನ್ನಾಗಿ ಒಣಗಿಸಿ.
- ಶ್ರವಣೊಪಕರಣವನ್ನು ಕೆಳಗೆ ಬೀಳಸಬೇಡಿ.
- ಹತ್ತಿಯಿಂದ ಅಥವಾ ಒಣಗಿದ ಬಟ್ಟೆಯಿಂದ ಶ್ರವಣೋಪಕರಣವನ್ನು ಒರೆಸಿ ಸ್ವಚ್ಛವಾಗಿಡಿ.
- ಶ್ರವಣೋಪಕರಣವನ್ನು ಕ್ಷ-ಕಿರಣಗಳಗೆ ತೆರೆದಿಡಬೇಡಿ.

ನಿಮಗೆ ಸೂಚಿಸಿದ ಬಲಕಿವಿಯ ಶ್ರವಣೋಪಕರಣವನ್ನು ಎಡಕಿವಿಗೆ ಅಥವಾ ಎಡಕಿವಿಯದ್ದನ್ನು ಬಲಕಿವಿಗೆ ಉಪಯೋಗಿಸಬಾರದು, ನಿಮ್ಮ ಶ್ರವಣತಜ್ಞರ ಸಲಹೆ ಮೇರೆಗೆ ಮಾತ್ರ ಹಾಗೆ ಮಾಡಬಹುದು.

ನಿಮ್ಮ ಶ್ರವಣೋಪಕರಣದ ಸೀರಿಯಲ್ ನಂಬರ್‌ಅನ್ನು ಬರೆದಿಟ್ಟುಕೊಳ್ಳುವುದು ಮುಖ್ಯ. ಈ ಮಾಹಿತಿಯ ಸಹಾಯದಿಂದ ನಿಮ್ಮ ಶ್ರವಣೋಪಕರಣವನ್ನು ಅದೇ ಮಾದರಿ ಹಾಗು ಅದೇ ಹೆಸರಿರುವ ಬೇರೆ ಶ್ರವಣೋಪಕರಣಗಳೊಂದಿಗೆ ಗುರುತಿಸಬಹುದು.


1) ಆ ಮಾಹಿತಿಯು ನಿಮ್ಮ ಶ್ರವಣೋಪಕರಣ ಕಳೆದು ಹೋದಲ್ಲಿ ಹುಡುಕಲು ಸಹಾಯಕವಾಗುತ್ತದೆ, ಅಥವಾ



2) ಏನಾದರೂ ರಿಪೇರಿಗೆ ಕೊಟ್ಟಲ್ಲಿ ಬೇಕಾಗುತ್ತದೆ.




3) ಒಂದೇ ಮನೆಯಲ್ಲಿ ಒಬ್ಬರಿಗಿಂತ ಹೆಚ್ಚು ಮಂದಿ ಶ್ರವಣೋಪಕರಣವನ್ನು ಉಪಯೋಗಿಸುತ್ತಿದ್ದಲ್ಲಿ ಸೀರಿಯಲ್ ನಂಬರ್ ಸಹಾಯಕವಾಗುತ್ತದೆ.



4) ಶ್ರವಣೋಪಕರಣದ ಬಗ್ಗೆ ನಿಮ್ಮ ಶ್ರವಣತಜ್ಞರೊಡನೆ ವ್ಯವಹರಿಸುವ ಅವಶ್ಯಕತೆಯಿದೆ.

**ನಿಮ್ಮ ಶ್ರವಣೋಪಕರಣದ ಸೀರಿಯಲ್ ಸಂಖ್ಯೆ.**

ಬಲಕಿವಿ :

ಎಡಕಿವಿ :

ನೀವು ನಿಮ್ಮ ಶ್ರವಣೊಪಕರಣವನ್ನು ರಿಪೇರಿ ಅಥವಾ ಸರ್ವಿಸ್‌ಗೆ ಕೊಟ್ಟಾಗ ಈ ಕೆಳಗಿನ ಅಂಶಗಳನ್ನು ಬರೆದಿಡಿ.

ದಿನಾಂಕ :

ಸ್ಥಳ :


ಯಾವ ಪ್ರಕಾರದ ರಿಪೇರಿ :

ಬದಲಾಯಿಸಿದ ಶ್ರವಣೋಪಕರಣ ಭಾಗ :


ಶುಲ್ಕ :

**ನಿಮ್ಮ ಶ್ರವಣೋಪಕರಣದ ವಿವಿಧ ಭಾಗಗಳ ಬಗ್ಗೆ ತಿಳಿದುಕೊಳ್ಳಿ :**


ಕಿವಿಯ ಹಿಂಭಾಗ ಧರಿಸುವ ಶ್ರವಣೋಪಕರಣ.





**ಕಿವಿಯೊಳಗಿರಿಸುವ ಶ್ರವಣೋಪಕರಣ**




**ಕಿವಿಯನಾಳದಲ್ಲಿರಿಸುವ ಶ್ರವಣೋಪಕರಣ**




**ಸಂಪೂರ್ಣವಾಗಿ ಕಿವಿಯನಾಳದಲ್ಲಿರಿಸುವ ಶ್ರವಣೋಪಕರಣ**





**ಶಬ್ದನಿಯಂತ್ರಣ** : ನಿಯಂತ್ರಿಸಬಹುದು/ನಿಯಂತ್ರಸಲಾಗುವುದಿಲ್ಲ

**ನಿಯಂತ್ರಿಸಬಹುದಾದರೆ, ಸಂಯೋಜನೆಗಳು ಸೂಚಿಸಿರುವುದು :** ಬಲಕಿವಿ ಎಡಕಿವಿ.

**ಪ್ರೋಗ್ರಾಮ್ ಸ್ವಿಚ್ :** ನಿಯಂತ್ರಿಸಬಹುದು / ನಿಯಂತ್ರಿಸಲಾಗುವುದಿಲ್ಲ

**ನಿಯಂತ್ರಿಸಬಹುದಾದರೆ:** ಪ್ರೋಗ್ರಾಂ 1– ಪ್ರೋಗ್ರಾಂ 2– ಇತರೆ–

**ನಿಮ್ಮ ಶ್ರವಣೋಪಕರಣಕ್ಕೆ ಸೂಚಿಸಿರುವ ಬ್ಯಾಟರಿ :**




**ಬ್ಯಾಟರಿಯ ವೋಲ್ಟೇಜ್** : 1.4 **ವೋಲ್ಟ್**

ಬಹುಮುಖ್ಯವಾಗಿ ತಿಳಿದುಕೊಳ್ಳಬೇಕಾದದ್ದೇನೆಂದರೆ ನಿಮಗೆ ಸೂಚಿಸಿದ ಬ್ಯಾಟರಿಯ ಬದಲಾಗಿ ಬೇರೆಯ ಬ್ಯಾಟರಿಯನ್ನು ಉಪಯೋಗಿಸಿದರೆ ಅದು ಕೆಲಸಮಾಡುವುದಿಲ್ಲ. ಇವು ಜಿಂಕ್ ಏರ್ ಬ್ಯಾಟರಿಗಳು. ಬ್ಯಾಟರಿ ಮೇಲಿರುವ ಅಂಟು ಕಾಗದವನ್ನು (ಬಣ್ಣದ್ದು) ತೆಗೆದರೆ ಅದು ಗಾಳಿಯಲ್ಲಿರುವ ಆಮ್ಲಜನಕದ ಜೊತೆ ಪ್ರತಿಕ್ರಿಯಿಸುತ್ತದೆ. ನಂತರ ಚಾರ್ಜಗಳನ್ನು ಡಿಸ್ಚಾರ್ಜ್ ಮಾಡುತ್ತದೆ. ಆದ್ದರಿಂದ ಅದನ್ನು ಶ್ರವಣೋಪಕರಣದ ಒಳಗೆ ಹಾಕುವ ಮುನ್ನ ಮಾತ್ರ ತೆಗೆಯಿರಿ. ನೀವು ಬ್ಯಾಟರಿಯನ್ನು ಒಳಗೆ ಹಾಕುವಾಗ ಬ್ಯಾಟರಿಯ '+' ಭಾಗವು ಬ್ಯಾಟರಿ ಇಡುವ ಸ್ಥಳದ '+' ಭಾಗಕ್ಕೆ ಬರುವಂತೆ ಹಾಕಬೇಕು. ಹಾಗೆಯೇ ಬ್ಯಾಟರಿಯ '–' ಭಾಗವನ್ನು ಬ್ಯಾಟರಿ ಇಡುವ ಸ್ಥಳದ '–' ಭಾಗಕ್ಕೆ ಬರುವಂತೆ ಹಾಕಬೇಕು.

**ಕಿವಿಯ ಅಚ್ಚು :–** ಕಿವಿಯ ಅಚ್ಚನ್ನು ಪ್ಲಾಸ್ಟಿಕ್‌ನಿಂದ ಮಾಡಲ್ಪಟ್ಟು ನಿಮ್ಮ ಕಿವಿಗೆ ಅದು ಸರಿಯಾಗಿ ಕೂರುವಂತೆ ಅಳತೆ ತೆಗೆದುಕೊಂಡು ಮಾಡಲಾಗುತ್ತದೆ. ಇದನ್ನು ಪ್ರತಿಯೊಂದು ವ್ಯಕ್ತಿಯ ಕಿವಿಯ ಅಳತೆಗೆ ಮಾಡಲ್ಪಡುತ್ತದೆ. ಇದು ಶ್ರವಣೋಪಕರಣದ ಜೊತೆ ಕೂಡಿಸಲಾಗುತ್ತದೆ. ಕಿವಿಯ